ಉ) ಈ ಕ್ಷೇತ್ರಗಳಲ್ಲಿ ಸಣ್ಣ ಸಣ್ಣ ರಸ್ತೆಗಳಲ್ಲಿ ಈರೀತಿ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟಿರುವುದರಿಂದ ಸಾರಿಗೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿರುವುದು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಕಳೆದ 5 ವರ್ಷಗಳಲ್ಲಿ (91-92ರಿಂದ 95-96ರವರೆಗೆ (24-2-96) ಕೆಳಕಂಡಂತೆ ಕ್ಷೇತ್ರವಾರು ಕಟ್ಟಡಗಳ ಮಂಜೂರಾತಿ ನೀಡಲಾಗಿದೆ.

ವರ್ಷ	ಭಾರತೀನಗರ	ಶಿವಾಜಿನಗರ	ಜಯಮಹಲ್	ಒಟ್ಟು
91-92	12	21	15	46
92-93	5	21	14	40
93-94	14	22	10	46
94-95	16	63	21	100
95-96	16	33	14	63
ಒಟ್ಟು	**63**	**160**	**74**	**297**

ಆ) ಗಮನಕ್ಕೆ ಬಂದಿದೆ.

ಇ) ಕಟ್ಟಡದ ಪ್ಲಿಂತ್ ಎಲಿಯಾ ಪ್ರದೇಶದಲ್ಲಿ ಬರುವ ಮರಗಳನ್ನು ಅರಣ್ಯ ಇಲಾಖೆಯ ಅನಪೇಕ್ಷಿತ ಪತ್ರವನ್ನು ಪಡೆದೇ ತೆಗೆಯಬೇಕೆಂದು ಷರತ್ತಿನೊಂದಿಗೆ ಕಟ್ಟಡ ಪರವಾನಗಿ ಕೊಡಲಾಗಿದೆ.

ಈ) ತೆಗೆದಿರುವ ಮರಗಳ ಬದಲಾಗಿ ಅಷ್ಟೆ ಸಂಖ್ಯೆಯ ಗಿಡಗಳನ್ನು ನೆಡಲಾಗಿದೆ.

ಉ) ಅಂತಹ ದೂರುಗಳೇನೂ ಬಂದಿರುವುದಿಲ್ಲ.

ಊ) ಅಂತಹ ಸಂದರ್ಭ ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಲು ಸರ್ಕಾರವು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಗಡಿ ಪ್ರದೇಶಗಳಲ್ಲಿ ಪಾನ ನಿಷೇಧ

313 - ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಂಪೂರ್ಣ ಪಾನ ನಿಷೇಧ ಮಾಡುವುದರ ಬಗ್ಗೆ ಸರ್ಕಾರದ ನಿಲುವೇನು? ಸಂಪೂರ್ಣ ಪಾನ ನಿಷೇಧ ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಸರ್ಕಾರದ ಪ್ರಯತ್ನಗಳೇನು?

ಶ್ರೀ. ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ರಾಜ್ಯದಲ್ಲಿ ಪಾನ ನಿಷೇಧವನ್ನು ಪುನಃ ಜಾರಿಗೊಳಿಸಲು ಸರ್ಕಾರ ಗಂಭೀರವಾಗಿ

ಆಲೋಚಿಸುತ್ತಿದೆ. ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಬಾದಾಮಿ ತಾಲ್ಲೂಕು ಮಲಪ್ರಭಾ ಎಡದಂಡೆ ಕಾಲುವೆ ನಿರ್ಮಾಣ.

314 - ಶ್ರೀ ಬಿ.ಬಿ. ಬಿಮ್ಮನಹಳ್ಳಿಕಟ್ಟಿ (ಬಾದಾಮಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬಾದಾಮಿ ತಾಲ್ಲೂಕಿನ ಮಿಲಪ್ರಭಾ ಎಡದಂಡೆ ಕಾಲುವೆಯ 82 ಕಿ.ಮೀ.ನಿಂದ 168 ಕಿ.ಮೀ.ನಲ್ಲಿ ಎಷ್ಟು ಕಾಮಗಾರಿ ಪೂರ್ತಿಗೊಂಡಿವೆ ಎಷ್ಟು ಪ್ರಗತಿಯಲ್ಲಿವೆ (ಕಾಲುವೆ, ಭೌತಿಕ, ಆರ್ಥಿಕ ವಿವರ ಒದಗಿಸುವುದು.

2) ಈ ಕಾಮಗಾರಿಗಳಿಗೆ ಸರ್ಕಾರದಿಂದ ಮಂಜೂರಾತಿ ನೀಡಿದ ಹಣ ಹಾಗೂ ಖರ್ಚಾದ ಹಣ (1991 ರಿಂದ 1996) ಜನವರಿ)ವರೆಗೆ ವಿವರ ನೀಡುವುದು.

3) ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣವಾಗಿ ಮುಗಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಮಲಪ್ರಭಾ ಎಡದಂಡೆ ಕಾಲುವೆ, ಕಿ.ಮೀ. 82 ರಿಂದ 168 ರವರೆಗೆ ಕೆಲಸ ಪೂರ್ತಿಗೊಂಡಿದೆ. ಕಿ.ಮೀ 127 ರಿಂದ 134 ರವರೆಗೆ ಕೆಲಸ ಪ್ರಗತಿಯಲ್ಲಿದೆ. ಅಲ್ಲದೆ 18 ಹಂಚು ಕಾಲುವೆಗಳು 108 ಉಪ ಹಂಚು ಕಾಲುವೆ ಪೂರ್ಣಗೊಂಡಿವೆ. ಹಾಗೂ ಬ್ಲಾಕ್ 52ರವರೆಗೆ ಕೆಲಸ ಪೂರ್ತಿ ಮುಗಿದು 53 ಬ್ಲಾಕಿನ ಕೆಲಸ ಪ್ರಗತಿಯಲ್ಲಿದೆ.

2)	ವರ್ಷ	ಅನುದಾನ (ಲಕ್ಷ ರೂ.ಗಳಲ್ಲಿ)	ಖರ್ಚು (ಲಕ್ಷ ರೂ.ಗಳಲ್ಲಿ)
1)	1991-92	174.19	180.96
2)	1992-93	252.26	375.84
3)	1993-94	602.53	464.50
4)	1994-95	484.80	181.88
5)	1995-96	454.67	132.60

3) 1995-96ನೇ ಸಾಲಿಗಾಗಿ ಮಲಪ್ರಭಾ ಎಡದಂಡೆ ಕಾಲುವೆಗೆ ಕಿ.ಮೀ. 133 ವರೆಗಿನ ಕಾಮಗಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ಈಗಾಗಲೇ ಕಿ.ಮೀ. 195 ರಿಂದ 14-000 ವರೆಗೆ ಸಾಲು ನೆಲೆಗೆ ಅನುಮೋದನೆಯನ್ನು ಡಿಸೆಂಬರ್ 95ರಂದು ನೀಡಲಾಗಿದೆ. ಕಿ.ಮೀ. 142-000 ರಿಂದ ಕಿ.ಮೀ. 150-080 ವರೆಗೆ ಸರ್ವೇ ಕಾರ್ಯ ಮುಗಿದಿದ್ದು ಸಾಲುನೆಲೆಯ ಅನುಮೋದನೆಯು ಪರಿಶೀಲನೆಯಲ್ಲಿದೆ. ಎಲ್ಲಾ ಕೆಲಸಗಳನ್ನು 2000ನೇ ಇಸವಿ ಯೊಳಗೆ ಪೂರ್ತಿಗೊಳಿಸಲು ಸರ್ವ ಪ್ರಯತ್ನ ಮಾಡಲಾಗುವುದು.